**<u>O.S.No.556/2023 - P.W.1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 18-04-2024.</u>**

**<u>ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :</u>**

**1)** ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ವಿಲ್ ನಾಮೆ ದಿ.21-01-2017 ರ ದೃಢೀಕೃತ ನಕಲನ್ನು -ನಿ.ಪಿ.1 ಎಂದು, ಮೂರು ಜಿಪಿಎ ದಿನಾಂಕ 20-05-2017 ರ ದೃಢೀಕೃತ ನಕಲುಗಳನ್ನು - ನಿ.ಪಿ.2 ರಿಂದ ನಿ.ಪಿ.4 ಎಂದು, ಕ್ರಯಪತ್ರ ದಿ.15-03-2023 ರ ದೃಢೀಕೃತ ನಕಲನ್ನು - ನಿ.ಪಿ.5 ಎಂದು, ಕ್ರಯಪತ್ರ ದಿ.15-03-2023 ರ ದೃಢೀಕೃತ ನಕಲನ್ನು - ನಿ.ಪಿ.6 ಎಂದು, ಒಂದು ಪಹಣಿ ಪತ್ರಿಕೆಯನ್ನು - ನಿ.ಪಿ.7 ಎಂದು, ಮ್ಯುಟೇಶನ್ ರಿಜಿಸ್ಟರಿನ ಪ್ರತಿಗಳನ್ನು - ನಿ.ಪಿ.8 ರಿಂದ ನಿ.ಪಿ.10 ಎಂದು, ವೆಂಕಟಪ್ಪ ಅವರ ಮರಣ ಪ್ರಮಾಣ ಪತ್ರವನ್ನು - ನಿ.ಪಿ.11 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿಗಳ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**